

ಕೋಲಾರ ಚಿನ್ನದ ಗಣಿಗಳಲ್ಲಿ ಇನ್ನೂ ಚಿನ್ನವಿದೆ. ಇದರಲ್ಲಿ ಯಾವ ಅನುಮಾನವೂ ಬೇಡ. ಆದರೆ ನೆಲದಾಳದಿಂದ, ಭೂಮಿ ಮೇಲಿರುವ ಸೈನೈಡ್ ಗುಡ್ಡಗಳಿಂದ ಅಪ್ಪಟ ಚಿನ್ನ ಹೊರತೆಗೆಯುವುದು ಸಾಧ್ಯವೇ? ಎಂಬುದು ಪ್ರಶ್ನೆ.

ಇಪ್ಪತ್ತನೇ ಶತಮಾನದ ಕೊನೆಗೆ ಶುರುವಾಗಿ, ಹೊಸ ಸಹಸ್ರಮಾನದ ಮೊದಲ ವರ್ಷವೇ (2001) ಗಣಿಗಳು ಮುಚ್ಚಿದ ನಂತರವೂ ಈ ಪ್ರಶ್ನೆಗೆ ಉತ್ತರ ಸಿಕ್ಕಿರಲಿಲ್ಲ. ಆದರೆ ಮೇಲ್ನೋಟಕ್ಕೆ ಆಶಾದಾಯಕ ಉತ್ತರವೊಂದು ಈಗ ಕೇಳಿ ಬಂದಿದೆ. ಕೇವಲ ಊಹಾಪೋಹಗಳಲ್ಲಿಯೇ ಇದ್ದ ವಿಚಾರಕ್ಕೆ ಖಚಿತ ಮಾಹಿತಿ ಹೊರ ಬೀಳಬೇಕಾಗಿದೆ. ಆದರೆ ಗಟ್ಟಿ ಆಶ್ವಾಸನೆಯೊಂದು ಕೇಳಿಬಂದಿರುವುದಂತೂ ನಿಜ.

ಕೆ.ಜಿ.ಎಫ್. ಗಣಿಗಳ ಮರುಜೀವ ಪ್ರಕ್ರಿಯೆಗೆ ಒಂದಷ್ಟು ಸಮಯ ಹಿಡಿಯಬಹುದಾದರೂ ಗಣಿಗಳಿಗೆ ಜೀವ ಬರಲು ಕೆಲವು ಕಾರಣಗಳಂತೂ ಇವೆ. ಅದರಲ್ಲಿ ಬಹಳ ಮುಖ್ಯವಾದುದು ಭಾರತೀಯರ ಚಿನ್ನದ ಉಪಯೋಗ. ಚಿನ್ನದ ಬಳಕೆಯಲ್ಲಿ ಭಾರತಕ್ಕೆ ವಿಶ್ವದಲ್ಲೇ ದ್ವಿತೀಯ ಸ್ಥಾನ. ಒಂದು ಅಂದಾಜಿನ ಪ್ರಕಾರ ಬ್ರಿಟಿಷರು ಕೆ.ಜಿ.ಎಫ್. ಗಣಿಗಳಿಂದ ನೂರು ವರ್ಷಕ್ಕೂ ಹೆಚ್ಚುಕಾಲ ಹೊರತೆಗೆದದ್ದು ಸುಮಾರು 800 ಟನ್‌ಗಳು. ಆದರೆ ಈಗ ಭಾರತ ಆಮದು ಮಾಡಿಕೊಳ್ಳುತ್ತಿರುವ ಚಿನ್ನ 850 ಟನ್‌ಗೂ ಅಧಿಕ ಅದೂ ಪ್ರತಿ ವರ್ಷಕ್ಕೆ! ಚಿನ್ನದ ಆಮದಿಗಾಗಿಯೇ ಭಾರತದ ಬೊಕ್ಕಸದಿಂದ ಖರ್ಚು ಮಾಡುತ್ತಿರುವ ವಿದೇಶಿ ವಿನಿಮಯದ ಮೊತ್ತ ಅಂದಾಜು 35–40 ಶತಕೋಟಿ ಡಾಲರ್‌ಗಳು. ಅಂದರೆ ಸುಮಾರು 2.04 ಲಕ್ಷ ಕೋಟಿ ರೂಪಾಯಿಗಳು. ಪ್ರಸ್ತುತ ಕರ್ನಾಟಕದ ರಾಯಚೂರು ಜಿಲ್ಲೆ ಹಟ್ಟಿ ಚಿನ್ನದ ಗಣಿಗಳಲ್ಲಿ ಮಾತ್ರ ಚಿನ್ನದ ಉತ್ಪಾದನೆ ಆಗುತ್ತಿದ್ದು ಇಲ್ಲಿಯ ವಾರ್ಷಿಕ ಪ್ರಮಾಣ 2 ರಿಂದ 3 ಟನ್‌ಗಳು ಮಾತ್ರ.

ಉತ್ಪಾದನೆ ಅತ್ಯಂತ ಕಡಿಮೆ ಪ್ರಮಾಣದಲ್ಲಿದ್ದು ಆಮದು ಮಾಡಿಕೊಳ್ಳುವಲ್ಲಿ ಮುಂದಿರುವ ಭಾರತದ ಅರ್ಥವ್ಯವಸ್ಥೆಗೆ ಇದು ಬಲು ದುಬಾರಿ. ಈ ಕಾರಣಕ್ಕಾಗಿ ನಮ್ಮಲ್ಲೇ ಲಭ್ಯವಿರುವ ಚಿನ್ನದ ನಿಕ್ಷೇಪಗಳಿಂದ ಉತ್ಪಾದನೆ ಕೈಗೊಂಡರೆ ವಿದೇಶಿ ವಿನಿಮಯ ಮೊತ್ತ ತಗ್ಗಿಸುವುದು ಸಾಧ್ಯವೆಂಬುದನ್ನು ಮನಗಂಡ ಕೇಂದ್ರ ಸರ್ಕಾರ ಮುಚ್ಚಿಹೋಗಿದ್ದ ಕೆ.ಜಿ.ಎಫ್. ಗಣಿಗಳತ್ತ ಗಮನ ಹರಿಸಿದೆ.

ಹೀಗಾಗಿ ಚಿನ್ನದ ಗಣಿಗಳ ಪುನರಾರಂಭದ ಮಾತು ಜೋರು.



## ಶಿಲಾ ಸ್ಫೋಟಗಳ ಗಣಿ

ಗಣಿಗಳಲ್ಲಿ ಸುರಂಗ ಕೊರೆಯುವಾಗ, ಹಳದಿ ಪದರುಗಳನ್ನು ಬೇರ್ಪಡಿಸುವಾಗ ಸ್ಫೋಟಕಗಳ ಬಳಕೆ ಸಾಮಾನ್ಯ. ಇಂತಹ ಸ್ಫೋಟಕಗಳ ಬಳಕೆ ನಡೆದಾಗಲೆಲ್ಲಾ ಕೆ.ಜಿ.ಎಫ್. ನಗರ ಹಾಗೂ ಅಕ್ಕಪಕ್ಕದ ಪ್ರದೇಶಗಳಲ್ಲಿ ಭೂಮಿ ಕಂಪನ. ಕಟ್ಟಡಗಳು ಬಿರುಕು ಬಿಡುವುದು ಮಾಮೂಲು.

ಆದರೆ ಇಂತಹ ಸ್ಫೋಟಗಳ ಸಂದರ್ಭದಲ್ಲಿ ಆಸು ನೀಗಿದ ಗಣಿ ಕಾರ್ಮಿಕರು ಅಸಂಖ್ಯ. ಕೆ.ಜಿ.ಎಫ್. ಗಣಿಗಳ ಸ್ಫೋಟಗಳಿಗೆ ಆಹುತಿಯಾದವರು ಸುಮಾರು 18 ಸಾವಿರ ಕಾರ್ಮಿಕರು.

ಮೊದ ಮೊದಲಿಗೆ ಸ್ಫೋಟಕಗಳಿಂದಾಗಿ ಸಾವಿನ ಸಂಖ್ಯೆ ಹೆಚ್ಚಿತ್ತು. ನಂತರ ಸುಧಾರಿತ ಸುರಕ್ಷತಾಕ್ರಮಗಳಿಂದ ಸಾವು ಕಡಿಮೆ ಆಯಿತು.

ನೆಲದಾಳದ ಬಂಡೆಗಳು ಉರುಳಿ ಕೆಲವು ವೇಳೆ ಪಾಳಿಯಲ್ಲಿದ್ದ ಎಲ್ಲ ಕಾರ್ಮಿಕರೂ ಗಣಿ ಪಾಲಾದ ಘಟನೆಗಳಿದ್ದು 1910 ರಲ್ಲಿ ಸಂಭವಿಸಿದ ಸ್ಫೋಟದಲ್ಲಿ ಒಂದೇ ದಿನ 37 ಕಾರ್ಮಿಕರು ಶವವಾಗಿ ಹೋದರು.

ಇದರಿಂದಲೇ ಗಣಿಗಳ ಒಳಕ್ಕೆ ಇಳಿಯುವಾಗ ಕಾರ್ಮಿಕರು ಈ ಹಾಡು ಹೇಳುತ್ತಿದ್ದರು...

‘ಒಳಗೆ ಹೋದರೆ ಹೆಣ
ಹೊರಗೆ ಬಂದರೆ ಚಿನ್ನ...